# ಅಂಕಗಳಷ್ಟೇ ಮುಖ್ಯವಲ್ಲ, ಆದರೆ ಅಂಕಗಳೂ ಮುಖ್ಯ

ಮಕ್ಕಳು ಉದಾಸೀನ ಪ್ರವೃತ್ತಿಯಿಂದ ಸುಲಭದ ದಾರಿಗಳನ್ನು ಆರಿಸಿಕೊಳ್ಳುತ್ತಿದ್ದಾರೆಯೇ ಎನ್ನುವುದನ್ನು ಪೋಷಕರು ಗಮನಿಸಬೇಕು. ಬೂದಿ ಮುಚ್ಚಿದ ಕೆಂಡದಂತೆ ಇರುವ ಮಕ್ಕಳ ಪ್ರತಿಭೆಯನ್ನು ಬೆಳಕಾಗಿಸಲು ಯಾವ ರೀತಿಯ ಶಿಕ್ಷಣದ ಅಗತ್ಯವಿದೆ ಎಂದು ಗುರುತಿಸುವುದು ಅಗತ್ಯ.

■ ಸ್ವಯಂಪ್ರಭಾ



ಒಂಬತ್ತನೇ ತರಗತಿಯಲ್ಲಿಯೇ ಓದಿನ ತೀವ್ರತೆಯನ್ನು ನಿಧಾನವಾಗಿ ಹೆಚ್ಚಿಸಿದರೆ, ಹತ್ತನೇ ತರಗತಿಯ ಕಠಿಣ ಪರಿಶ್ರಮಕ್ಕೆ ಅಡಿಪಾಯ ಹಾಕಿದಂತಾಗುತ್ತದೆ ಎಂಬುದು ಹಲವು ಪೋಷಕರು ಮತ್ತು ಶಿಕ್ಷಕರ ಅಭಿಪ್ರಾಯ.

ಮೊನ್ನೆ ನೀತಶ್ರೀಯ ಅಮ್ಮ ಉತ್ತಮ ಟ್ಯೂಷನ್ ಸಂಸ್ಥೆಯ ಕಚೇರಿಗೆ ಹೋದರು. ಎಂಟು ಗಂಟೆಗೇ ಮಗಳನ್ನು ಶಾಲೆವರೆಗೆ ಬಿಟ್ಟು, ಬಳಿಕ ಟ್ಯೂಷನ್‌ನತ್ತ ಹೆಜ್ಜೆ ಹಾಕಿದರು. 'ಮಗಳ ಮುಂದಿನ ಓದು ಹೇಗಿರಬೇಕು, ಫೀಸು ಎಷ್ಟು, ಯಾವಾಗ ತರಗತಿಗಳು ಇರುತ್ತವೆ ಎಂಬೆಲ್ಲ ಮಾಹಿತಿ ಪಡೆದು, ಮುಂದಿನ ಬೇಸಿಗೆ ಅವಧಿ ಮತ್ತು ಮುಂದಿನ ಶೈಕ್ಷಣಿಕ ವರ್ಷದ ಯೋಜನೆ ರೂಪಿಸುವುದು ನೀತಶ್ರೀಯ ಅಮ್ಮ ಲೀಲಕ್ಕನ ಉದ್ದೇಶ. ಅಂದಹಾಗೆ, ಲಾಕ್‌ಡೌನ್‌ನ ತಲೆಬಿಸಿಯ ನಡುವೆಯೇ ನೀತಶ್ರೀ ಈಗ ಎಂಟನೇ ತರಗತಿ ಪೂರೈಸುತ್ತಿದ್ದಾಳೆ.

ಆದೊಂದು ಪ್ರಸಿದ್ಧವಾದ ಟ್ಯೂಷನ್ ತರಗತಿ. ಮುಖ್ಯಸ್ಥರು ತರಗತಿಗೆ ಹೋಗಿದ್ದರಿಂದ, ಕಾಯುವ ಕೊಠಡಿಯಲ್ಲಿ ಲೀಲಕ್ಕ ಕುಳಿತರು. ಪಕ್ಕದ ತರಗತಿಯಿಂದ ಪಾಠ ಕೇಳುತ್ತಿತ್ತು. ಪಿಯುಸಿ ತರಗತಿಯ ಫಿಸಿಕ್ಸ್‌ನ 'ಥರ್ಮೊ ಡೈನಮಿಕ್ಸ್' ಪಾಠ ಸ್ಪಷ್ಟವಾಗಿ ಕೇಳುತ್ತಿತ್ತು. ಹದವಾದ ಧ್ವನಿಯ ಮೈಕ್ ಇರಿಸಿಕೊಂಡು ಅವರು ಪಾಠ ಹೇಳುತ್ತಿದ್ದರು. ಬಹಳ ಅಚ್ಚುಕಟ್ಟಾದ ತರಗತಿ.

ಕಾಯುವ ಕೊಠಡಿಯಲ್ಲಿದ್ದ ಮತ್ತೊಬ್ಬರು ಸೀರೆ ಉಟ್ಟ ಮಹಿಳೆ ಲೀಲಕ್ಕನನ್ನು ಮಗುಳುನಕ್ಕರು. 'ಬಹಳ ಚೆನ್ನಾಗಿ ಪಾಠ ಮಾಡುತ್ತಾರೆ ಈ ಸರ್' ಎಂಬ ಸಾಲಿನೊಂದಿಗೆ ಮಾತು ಶುರುವಾಯಿತು. ಅವರ ಮಾತಿನ ಹೂರಣವಿಷ್ಟು: ನನ್ನ ಮಗನನ್ನು ಕರೆದುಕೊಂಡು ಹೋಗುವುದಕ್ಕೆ ಸ್ವಲ್ಪ ಮುಂಚಿತವಾಗಿಯೇ ನಾನು ಬರುತ್ತೇನೆ. ಈ ಪಾಠಗಳು ನಾನು ಪಿಯುಸಿ ಓದುವಾಗಲೂ ಇದ್ದವು. ಫಿಸಿಕ್ಸ್ ಎಂದರೆ ನನಗೆ ಬಹಳ ಇಷ್ಟ. ಸರ್ಕಾರಿ ಕಾಲೇಜೊಂದರಲ್ಲಿ ನಮಗೆ ಪಾಠಕ್ಕೆ ಅಧ್ಯಾಪಕರೂ ಇರಲಿಲ್ಲ, . ಪ್ರಾಕ್ಟಿಕಲ್ ಅಂಕಗಳನ್ನು ಅಂದಾಜಿಗೆ ಕೊಟ್ಟುಬಿಟ್ಟಿದ್ದರು. ಹಾಗೆ ತಪ್ಪಿಹೋದ ಶಿಕ್ಷಣದ ಅಡಿಪಾಯ, ತಪ್ಪಿಯೇ ಹೋಯಿತು. ಇಷ್ಟು ಚೆನ್ನಾಗಿ ಪಾಠ ಕೇಳುವ ಅವಕಾಶವಿದ್ದಿದ್ದರೆ ಒಳ್ಳೆಯ ಅಂಕ ಪಡೆದು ಉದ್ಯೋಗ ಪಡೆಯುತ್ತಿದ್ದೆನೋ ಗೊತ್ತಿಲ್ಲ. ಈಗ ಹೀಗೆ ಬೇಗ ಬಂದು, ಕಿಟಕಿ ಬದಿ ಕುಳಿತು ಸುಮ್ಮನೇ ಪಾಠ ಕೇಳುತ್ತೇನೆ' ಎಂದರು. ಪಾಠವಂಚಿತರಾದ ವಿದ್ಯಾರ್ಥಿಗಳು ಹೀಗೆ ತರಗತಿಯ ಹೊರಗೆ ಪಾಠವನ್ನು ಕದ್ದು ಕೇಳುವ ಕತೆಗಳನ್ನಷ್ಟೇ ಲೀಲಕ್ಕ ಕೇಳಿದ್ದರು. ಆದರೆ ಹೀಗೆ, ವಿದ್ಯಾರ್ಥಿಯ ತಾಯಿ, ಪಾಠಗಳನ್ನು ಕೇಳಲು ಹಂಬಲಿಸುವುದನ್ನು ಅವರು ಎಲ್ಲಿಯೂ ಕಂಡಿರಲಿಲ್ಲ.

ಸಾಮಾನ್ಯವಾಗಿ ಸಂಗೀತ, ನೃತ್ಯ ಮುಂತಾದ ಲಲಿತಕಲೆಗಳ ಕಲಿಕೆಯಲ್ಲಿ ಆಸಕ್ತಿ ಇರುವ ವ್ಯಕ್ತಿಗಳು ಅಥವಾ ತೋಟಗಾರಿಕೆ ಮುಂತಾದ ಕೌಶಲ ಆಧರಿತ ಕೆಲಸಗಳಲ್ಲಿ ಆಸಕ್ತಿ ಇರುವವರು, ತಮ್ಮ ವಿದ್ಯಾಭ್ಯಾಸ ಮುಗಿದ ಬಳಿಕ ಉದ್ಯೋಗ ಪಡೆದುಕೊಂಡು, ತಮ್ಮ ಮೂಲ ಆಸಕ್ತಿಗೆ ಹಿಂದಿರುಗುವುದುಂಟು. 'ನಾನು ಈಗಲಾದರೂ ಕಥಕ್ ಕಲಿಯಬೇಕು' ಎಂದು ತರಗತಿಗಳನ್ನು ಹುಡುಕಿಕೊಂಡು ಹೋದವರಿದ್ದಾರೆ. ಆದರೆ ಮೂವತ್ತೈದು ವರ್ಷವಾದ ಬಳಿಕ, ನನಗೆ ಫಿಸಿಕ್ಸ್ ಇಷ್ಟವೆಂದು ಮತ್ತೆ ಕಲಿಕೆಯನ್ನು ಆರಂಭಿಸುವುದು ಕಷ್ಟಸಾಧ್ಯ. ಹಿಂದೂಸ್ಥಾನಿ ಸಂಗೀತ ಕಲಿತುಕೊಂಡು, ವೃತ್ತಿಯನ್ನು ಕೈಬಿಟ್ಟು, ಕಲಾವಿದರಾದವರಿದ್ದಾರೆ. ಆದರೆ ಮತ್ತೆ ಫಿಸಿಕ್ಸ್ ಉಪನ್ಯಾಸಕರಾಗುವುದು ಬಹಳವೇ ಕಷ್ಟ.

ವಿಷಯವಿಷ್ಟೇ: ಕೆಲ ವಿಚಾರಗಳ ಕಲಿಕೆ ಆಯಾ ವಯಸ್ಸಿನಲ್ಲಿ ನಡೆದರೆ, ಅದರ ಸಂಪೂರ್ಣ ಫಲವನ್ನೂ ಸಂತಸವನ್ನೂ ಆಸ್ವಾದಿಸಲು ಸಾಧ್ಯ. ಅಂಕಗಳ ಬೆನ್ನಟ್ಟುವಿಕೆ ಒತ್ತಾಯದ ಹಿಂಸೆ ಆಗಬಾರದು. ಆದರೆ ವಿದ್ಯಾಭ್ಯಾಸ ಸಮರ್ಪಕವಾಗಿ ದೊರೆಯುವಂತೆ, ಉತ್ತಮ ವಾತಾವರಣವನ್ನು ಕಲ್ಪಿಸುವ ಜವಾಬ್ದಾರಿ ಪೋಷಕರದ್ದು.

ಇಷ್ಟಪಟ್ಟು ಕಲಿಯುವಿಕೆಯ ಬೆನ್ನು ಬಿದ್ದವರ ಬಗ್ಗೆ ಹಗುರವಾಗಿ ಮಾತನಾಡುವುದಾಗಲೀ, ಅಂತಹ ವಾತಾವರಣ ಒದಗಿಸುವ ಶಿಕ್ಷಕರ ಕುರಿತು ಉಡಾಫೆಯಿಂದ ಮಾತನಾಡುವುದು ಸೌಜನ್ಯದ ನಡವಳಿಕೆ ಅಲ್ಲ. ಅಂಕಗಳ ಬೆಂಬತ್ತಿ ಸಾಧನೆ ಮಾಡುವ ಅವಕಾಶಗಳು ಇದ್ದೇ ಇವೆ. ಅಂಕಗಳ ಆಸಕ್ತಿ ಇಲ್ಲದ ಮಕ್ಕಳಿಗೆ ಬಲವಂತವಾಗಿ ಒತ್ತಡ ಹೇರುವುದು ಸರಿಯಲ್ಲ. ಹಾಗೆಂದು, ಆಸಕ್ತಿ ಇರುವ ಮಕ್ಕಳನ್ನು ಟೀಕಿಸುವುದೂ ಸರಿಯಲ್ಲ.

ತಮ್ಮ ಮಕ್ಕಳ ಆಸಕ್ತಿಗಳನ್ನು ಗುರುತಿಸುವುದು ಪೋಷಕರಿಗೆ ಸವಾಲಿನ ವಿಷಯವೇ. ಉದಾಸೀನ ಪ್ರವೃತ್ತಿಯಿಂದ ಮಕ್ಕಳು ಸುಲಭವಾದ ದಾರಿಗಳನ್ನು ಆರಿಸುತ್ತಿದ್ದಾರೆಯೇ ಎಂದು ಗಮನಿಸಬೇಕಾಗುತ್ತದೆ. ಬೂದಿ ಮುಚ್ಚಿದ ಕೆಂಡದಂತೆ ಇರುವ ಅವರ ಪ್ರತಿಭೆಯನ್ನು ಬೆಳಕಾಗಿಸಲು ಯಾವ ರೀತಿಯ ಶಿಕ್ಷಣದ ಅಗತ್ಯವಿದೆ ಎಂದು ಗುರುತಿಸುವುದು ಅಗತ್ಯ. ಶಿಕ್ಷಣದ ತಿರುವಿನ ಸಂದರ್ಭದಲ್ಲಿ, ಅಂಕಗಳಷ್ಟೇ ಮುಖ್ಯವಲ್ಲ. ಆದರೆ ಅಂಕಗಳೂ ಮುಖ್ಯ.

ಪ್ರತಿಕ್ರಿಯಿಸಿ: feedback@sudha.co.in